Notification No. HD 151 TMT 83 dated 19th/22nd August, 1983 Exemption of Motor Vehicales Tax to the Attenders seat in Tprailer Bus No, MYD 9732 belonging to B. E. L.. Bangalore.

as required under Sections 16 (2) of the Karnataka Motor Vehicles Taxation Act, 1957.

ನಿಯಮ 59ರ ಮೇರೆಗೆ

"ಕ್ರಾಂತಿ" ದಿನಪತ್ರಿಕೆಯ ಸಂಪಾದಕ ಶ್ರೀ ಸಿದ್ಧರಾಮೇಶ್ವರವರ ಕೊಲೆಯ ಬಗ್ಗೆ

ಶ್ರೀ ಎಂ. ವೀರಪ್ಪ ಮೊಯಿಲಿ (ವಿರೋಧ ಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೇ, ನಾನು ನಿಯಮ 59ರ ಪ್ರಕಾರ ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ಇದನ್ನು ಗುಲ್ಬರ್ಗ ನಗರದಲ್ಲಿರತಕ್ಕ ಕ್ರಾಂತಿ ದಿನಪತ್ರಿಕೆಯ ಸಂಪಾದಕ ಸಿದ್ಧರಾಮೇಶ್ವರ ಅವರ ಕೊಲೆ ನಡೆದ ಬಗ್ಗೆ ಕಳುಹಿಸಿದ್ದೇವೆ. ಸಾಮಾವ್ಯವಾಗಿ ಒಬ್ಬರ ಕೊಲೆ ನಡೆದರೆ ಇಲ್ಲಿ ನಿಲುವಳಿ ಸೂಚನೆ ರೂಪದಲ್ಲಿ ಪ್ರಸ್ತಾಪಿಸುವುದಕ್ಕೆ ಬರುವುದಿಲ್ಲವೆಂದು ಕೂಡ ನನಗೆ ಗೊತ್ತಿದೆ. ಆದರೆ ಈ ಕೊಲೆ ನಡೆದ ದಿನಸ ಮತ್ತು ನಂತರ ನಡೆದಂತಹ ಕೆಲವು ಘಟನೆಗಳನ್ನು ಪ್ರಕರಣಗಳನ್ನು ನೋಡಿದರೆ ಇದು ಬರೀ ಒಂದು ನ್ಯಾಯ ಅಥವಾ ಶಿಸ್ತು ಪಾಲನೆಗೆ ಸಂಬಂಧಪಟ್ಟ ವಿಚಾರ ಅಲ್ಲ. ಇದು ಕರ್ನಾಟಕ ರಾಜ್ಯ ಮತ್ತು ಇಡೀ ರಾಷ್ಟ್ರದ ಒಂದು ಗಮನವನ್ನು ಸೆಳೆದಂತಹ ಸಾರ್ವಜನಿಕ ವಿಚಾರ ಮತ್ತು ಗಂಭೀರವಾದ ವಿಚಾರವಾಗಿರುವುದರಿಂದ ಇದು ಹೇಗೆ ನಿಲುವಳಿ ಸೂಚನೆ ಆಗುತ್ತದೆಂದು ಹೇಳಿ ತಮ್ಮ ಮನ ಒಲಿಸಲಿಕ್ಕೆ ತಾವು ಅವಕಾಶ ಕೊಡುತ್ತೀರೆಂದು ಭಾವಿಸಿ ವಿಚಾರವನ್ನು ಪ್ರಸ್ತಾಪಿಸುತ್ತಿದ್ದೇನೆ.

ಅಧ್ಯಕ್ಷರೇ ಈ ವಿಚಾರ ಈ ಸದನದಲ್ಲಿ ಈ ಹಿಂದೆ ಕೂಡ ಬಂದಿದೆ. 26 8-1983 ರಂದು ಗುಲ್ಬರ್ಗ ನಗರದ ಬ್ರಹ್ಮಪುರ ಪೋಲೀಸ್ ಠಾಣೆಗೆ ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳು ಮತ್ತು ಪೋಲೀಸರು ಸಿದ್ಧರಾಮೇಶ್ವರರ ಪತ್ರಿಕಾ ಕಛೇರಿಗೆ ಹೋಗಿ ಅವರನ್ನು ಹೊಡೆದು ಬಡಿದು ಥಳಿಸಿ ಮಾರ್ಗ ಮಧ್ಯೆ ಅವಮಾನಕರವಾದ ರೀತಿಯಲ್ಲಿ ಮೆರವಣಿಗೆ ಮಾಡಿದ ವಿಚಾರವನ್ನು ಸದನದಲ್ಲಿ ಎತ್ತಿದಾಗ ಮುಖ್ಯ ಮಂತ್ರಿಗಳು ಕೂಡ ಹೇಳಿಕೆ ಕೊಟ್ಟಿದ್ದಾರೆ. ಆದರಲ್ಲಿ ಸಿದ್ಧರಾಮೇಶ್ವರರ ಮೇಲೆ ಥಳಿಸಿದ ವಿಚಾರಲ್ಲಿ ಹಾಗೂ ಗಾಯಾಳುಗಳಾದುದರ ಬಗ್ಗೆ ವಿವರಗಳನ್ನು ಕೊಟ್ಟಿದ್ದು ಇದೆ. ಅದರ ಜೊತೆಯಲ್ಲಿ ಸುಮಾರು 7 ಕೇಸುಗಳು ಕೆಲವು ವರ್ಷಗಳ ಹಿಂದೆ ಅಂದರೆ 1973ರಲ್ಲಿ ಅಗಿವೆ. ಆದರ ವಿವರವನ್ನು ಕೂಡ ಮುಖ್ಯ ಮಂತ್ರಿಗಳು ಕೊಟ್ಟಿದ್ದಾರೆ.

ಆಗ ನಾವು ಈ ಸದನದಲ್ಲಿ ಹೇಳಿದ್ದು ಇದೆ. ಅದು ಸದನದ ದಾಖಲೆಯಲ್ಲಿ ಕೂಡ ಬಂದಿದೆ. ಅವನಿಗೆ ಯಾವ ರೀತಿಯ ರಕ್ಷಣೆ ಕೂಡ ಮೊದಲಿನಿಂದಲೂ ಸಿಗುತ್ತಿಲ್ಲ, ಮತ್ತು ಬೇರೆಯವರಿಂದಲೂ ಸಿಗುತ್ತಿಲ್ಲ. ಅವನ ಪ್ರಾಣಕ್ಕೆ ಆಪಾಯ ಇದೆ. ಆದ್ದರಿಂದ ಅವನಿಗೆ ರಕ್ಷಣೆ ಕೊಡಬೇಕೆಂದು ನಾವು ಕೂಡ ಈ ಸಭಸದಲ್ಲಿ ಹೇಳಿದ್ದನ್ನು ಮತ್ತು ಬೇರೆ ಮಾನ್ಯ ಸದಸ್ಯರೂ ಹೇಳಿದ್ದನ್ನು ಇನತ್ತು ನೆನಪು ಮಾಡಲಿಕ್ಕೆ ಇಚ್ಛಿಪಡುತ್ತೇನೆರೆ ಅದಾದನಂತರ ಕೂಡ ಮತ್ತೊಮ್ಮೆ ಈ ವಿಚಾರವನ್ನು ನಾವು ಎತ್ತಿದ್ದೇವೆ. ಅವರಿಗೆ ಬಹಳ ತೊಂದರೆಯಾಗುತ್ತಿದೆ, ಅವರ ಪ್ರಾಣಕ್ಕೆ ಭಯ ಇದೆ, ಅಪಾಯ ಬರುತ್ತದೆ ಎಂದು ಪ್ರಶ್ನೆಯನ್ನು ಎತ್ತಿದ್ದಾರೆ. ಅವರನ್ನು ಗುಲ್ಬರ್ಗ ನಗರದಿಂದಲೇ ಗಡೀಪಾರು ಮಾಡತಕ್ಕ ಪ್ರೊಸೀಡಿಂಗ್ಸ್ ಮಾಡಿದ್ದು ನೋಡಿದಂತೆ ಕ್ರಾಂತಿ ಪತ್ರಿಕೆಯ ಸಂಪಾದಕನ ಮೇಲೆ ಒಂದು ರೀತಿಯ ಹಠ, ಛಲದಿಂದ ಸರ್ಕಾರ ಕ್ರಮ ಕೈಗೊಂಡು ಕಾಣುತ್ತದೆ. ನಾನು ಮಂತ್ರಿಗಳ ವಿಚಾರ ಎತ್ತಬೇಕು ಎಂಬ ಉದ್ದೇಶದಿಂದ ಹೇಳುತ್ತಿಲ್ಲ. ಆ ಸಂಪಾದಕ ಮಂತ್ರಿಗಳ ಮೇಲೆ ಬರೆದಿದ್ದು. ನಮ್ಮ ಸರ್ಕಾರ ಇದ್ದಾಗ ಕೂಡ ಮಂತ್ರಿಗಳ ಮೇಲೆ ಬರೆದಿದರೆ ಗುಲ್ಬರ್ಗ ನಗರಕ್ಕೆ ಸಂಬಂಧಪಟ್ಟ ಮಂತ್ರಿಗಳ ಮೇಲೆ ಬರೆದಿದ್ದು. ಪೋಲೀಸ್ ಅಧಿಕಾರಿಗಳ ಮೇಲೆ ನಾನಾ ರೀತಿಯ ಕೆಟು ಟೀಕೆಗಳನ್ನು ಮಾಡತಕ್ಕ ಮತ್ತು ನಿರ್ಭೀತಿಯಿಂದ, ಬಹಳ ಕೆಚ್ಚಿನಿಂದ ಹೋಗತಕ್ಕ ಒಬ್ಬ ಪತ್ರಿಕಾಕರ್ತನಾಗಿದ್ದು. ಅವನು ಸದನದ ಮೂಲಕ ಪ್ರಸ್ತಾಪ ಮಾಡಿಸಿ ಸರ್ಕಾರದ ಹೊರೆ ಹೋಗಿದ್ದ, ಟಿಲಿಗ್ರಾಂ ಕಳುಹಿಸಿದ್ದ. ಪತ್ರ ಬರಯುತ್ತಿದ್ದ. ಕಳೆದ ತಿಂಗಳ 'ಕ್ರಾಂತಿ' ಪತ್ರಿಕೆಯಲ್ಲಿ ಒಂದು ದೊಡ್ಡ ಪತ್ರವನ್ನೇ ಬರೆದಿದ್ದಾನೆ. ನನಗೆ ಆ ಪತ್ರಿಕೆ ತಕ್ಷಣ ಸಿಗಲಿಲ್ಲ. ಆದನ್ನು ಮುಂದೆ ಚರ್ಚೆ ನಡೆಯುವ ಹೊತ್ತಿನಲ್ಲಿ ಹೇಳುತ್ತೇನೆ. ತನ್ನ ಪ್ರಾಣಕ್ಕೆ ಯಾವ ರೀತಿಯಲ್ಲಿ ಅಪಾಯ ಇದೆ ಎಂಬ ಬಗೆ

ನಾಲ್ಕು ಪುಟಗಳಲ್ಲಿ ಅತ ಸ್ಪಷ್ಟವಾಗಿ ಹೇಳಿದ್ದಾನೆ. ಇಷ್ಟೆಲ್ಲಾ ಹಿನ್ನೆಲೆ ಇದ್ದರೂ ಕೂಡ ಸರ್ಕಾರ ಯಾವ ರೀತಿಯ ಕ್ರಮವನ್ನೂ ತೆಗೆದುಕೊಳ್ಳದೆ ನಿರ್ಲಕ್ಷ್ಯ ಭಾವನೆಯಿಂದ, ಬೇಜವಾಬ್ದಾರಿತನ ಭಾವನೆಯಿಂದ, ಒಂದು ರೀತಿಯ ಹಠ, ಛಲದಿಂದ ಸಂಪೂರ್ಣವಾಗಿ ಅವನನ್ನು ಕೈಬಿಟ್ಟಿದೆ. **So that he could be exposed to any danger from any quarter** ಇದು ಒಂದು ತರಹ ಏನಾಗಿದೆ ಯೆಂದರೆ **it is just like putting a person in a Maidan allowing everyone to attack.** ಒಂದು ತರಹ ನಿಸ್ಸಹಾಯಕನಾಗಿ ಆ ಮನುಷ್ಯ ಇದ್ದಂಥ ಪರಿಸ್ಥಿತಿಯಲ್ಲಿ ಅವನು ಮೊರೆ ಹೋದರೂ ಕೇಳಲಿಲ್ಲ ನಾನು ಈ ಬಗ್ಗೆ ಮುಖ್ಯಮಂತ್ರಿಗಳಿಗೆ ಒಂದು ಕಾಗದವನ್ನೂ ಬರೆದಿದ್ದೆ. ಇಷ್ಟಿದ್ದರೂ ಕೂಡ ಯಾವ ರಕ್ಷಣೆ ಕೂಡ ಅವನಿಗೆ ಸಿಗಲಿಲ್ಲ. ಆ ದಿವಸ ರಾತ್ರಿ ಎರಡು ಸಾರಿ ಅವನಿಗೆ ಫೋನ್ ಕರೆ ಬಂದಿದೆ. ನೀನು ಯಾವಾಗ ಬರುತ್ತೀಯಾ ಎಂದು ಕೇಳಿದಾಗ ನಾನು ಬರುವುದಕ್ಕೆ ಆಗುವುದಿಲ್ಲ, ಬರೆಯುತ್ತಿದ್ದೇನೆ ಎಂದು ಹೇಳಿದ. ಕೊನೆಗೆ ಬೇಸರದಿಂದ ನೀನೇ ಬಾ ಎಂದು ಮ್ಯಾನೇಜರ್‌ಗೆ ಹೇಳಿ ಹೊರಟ. ಬಹುಶಃ ಅವನಿಗೆ ಪೋಲೀಸರ ಮತ್ತು ಸರ್ಕಾರದ ರಕ್ಷಣೆ ಇದೆ ಎಂಬ ಅಭಿಪ್ರಾಯ ಇದ್ದಿದ್ದರೆ, ವಿಶ್ವಾಸ ಇದ್ದಿದ್ದರೆ, ಈ ಕೊಲೆ ಆಗುತ್ತಿರಲಿಲ್ಲ. ಫೋನ್ ಕರೆ ಬಂದಾಗ, ಸಂಶಯವಿದ್ದರೂ ಕೂಡ ಅತ ಯಾರಿಗೆ ಮೊರೆ ಹೋಗಬೇಕು ? ಪೋಲೀಸರಿಗೆ ಫೋನ್ ಮಾಡಿದರೆ ರಕ್ಷಣೆ ಸಿಗುವುದಿಲ್ಲ ಆದರ ಬದಲು ಅದಕ್ಕಿಂತ ಹೆಚ್ಚು ಜೀವನಕ್ಕೆ ಅಪಾಯ ಬರುತ್ತದೆ, ಹೆಚ್ಚು ತೊಂದರೆಯಾಗುತ್ತದೆ ಎಂಬ ಒಂದು ರೀತಿಯ ನಿಸ್ಸಹಾಯಕ ನುನೋವೃತ್ತಿ ಆ ಪತ್ರಿಕಾ ಸಂಪಾದಕನಿಗಿತ್ತು. ಯಾವುದೇ ಸಂದರ್ಭದಲ್ಲಾದರೂ ಸರ್ಕಾರದ ಮೇಲೆ, ಪೋಲೀಸರ ಮೇಲೆ ವಿಶ್ವಾಸ ಇದ್ದಿದ್ದರೆ ಅವನು ಮಾಡುತ್ತಿದ್ದ, ರಕ್ಷಣೆ ಕೋರುತ್ತಿದ್ದ ಆದರೆ ಅವನಿಗೆ ಸರ್ಕಾರದ ರಕ್ಷಣೆ ಇಲ್ಲ, ಪೋಲೀಸರ ರಕ್ಷಣೆ ಇಲ್ಲ ಆದರೂ ಕೂಡ ಅವನು ನಿರ್ಭೀತಿಯಿಂದ ಕಟು ಟೀಕೆ ಮಾಡುವುದನ್ನು ನಿಲ್ಲಿಸಲಿಲ್ಲ ನಾನು ಪ್ರತ್ಯೇಕ ಪ್ರತ್ಯೇಕವಾಗಿ ಘಟನೆಗಳನ್ನು ಇಲ್ಲಿ ಹೇಳಲಿಕ್ಕೆ ಇಚ್ಛೆಪಡುವುದಿಲ್ಲ. ಅವನು ದೊಡ್ಡ ಹೋರಾಟ ಮಾಡಿದ್ದಾನೆ. ಮನೆ ಹತ್ತಿರ ಅವನು ಬರುವಾಗ ಅವನಿಗೆ ತಿವಿತದಿಂದ ರಕ್ತಸ್ರಾವವುಂಟಾಗಿ ಕೊಲೆಯಾಗಿದೆ. ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ, ಪತ್ರಿಕಾ ಸಂಪಾದಕರ ಬಗ್ಗೆ ಇಷ್ಟೊಂದು ಮಾತನಾಡತಕ್ಕ ಸರ್ಕಾರ ಒಂದು ಬೆರಳು ಕೂಡ ಅವನ ರಕ್ಷಣೆಗೆ ಇಡಲಿಲ್ಲ ಎಂದರೆ ಬಹುಶಃ ಎಷ್ಟರಮಟ್ಟಿಗೆ ಕಾನೂನಿನ ವ್ಯವಸ್ಥೆ ಇದೆ, ಅಮಾಯಕರು ನಿಸ್ಸಹಾಯಕತೆಯಿಂದ ಯಾವರೀತಿ ರಕ್ಷಣೆಯಿಲ್ಲದೆ ಮಿಕಿ ಮಿಕಿ ನೋಡಬೇಕಾಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಅಮಾಯಕರು ರಕ್ಷಣೆ ಇಲ್ಲದೇ ಇದ್ದಾರೆ ಎಂದು ಹೇಳುವುದಕ್ಕೆ ಇದು ನಿರ್ದಿಷ್ಟವಾದ ಪ್ರಕರಣವಾಗಿದೆ. ಇದು ಬರೀ ಗುಲ್ಬರ್ಗದ ಪ್ರಶ್ನೆಯಲ್ಲ ನಿಸ್ಸಹಾಯಕನಾದ ಮನುಷ್ಯನನ್ನು ಯಾರು ಬೇಕಾದರೂ ಬಂದು ಕೊಲ್ಲಬಹುದು ಎಂಬಭಾವನೆ ಬರುತ್ತಿದೆ. ಇದರ ಪರಿಣಾಮ ಇಡೀ ಕರ್ನಾಟಕ ರಾಜ್ಯದಲ್ಲಿ ಆಗುತ್ತದೆ. ಇಡೀ ಸಮಾಜದ ಮೇಲೆ ಆಗುತ್ತದೆ. ಮೊನ್ನೆ ಕಂಡಕ್ಟರ್ ಒಬ್ಬನನ್ನು ಒಬ್ಬ ಕೊಂದೇಬಿಟ್ಟ. ಇದು ಸರಿಯಾದ ಬೆಳವಣಿಗೆಯಲ್ಲ ನಾನು ನಿಸ್ಸಹಾಯಕನಾಗಿದ್ದೇನೆ. ನನಗೆ ಯಾವುದೇ ರೀತಿಯ ರಕ್ಷಣೆ ಇಲ್ಲ ಎಂದು ಹೇಳಿದರೂ ಯಾವುದೇ ರೀತಿಯ ಸಹಾಯವನ್ನು, ರಕ್ಷಣೆಯನ್ನೂ ಒದಗಿಸದೆ ಹೋದರೆ ರಾಜ್ಯದಲ್ಲಿ ಸರ್ಕಾರ ಇದೆಯೇ ಇಲ್ಲವೇ ಎಂದು ಸಂಶಯಪಡಬೇಕಾಗಿದೆ. ಈ ರೀತಿ ಸರ್ಕಾರ ಆಡಳಿತ ನಡೆಸುವುದರಿಂದ ಯಾವ ಪರಿಣಾಮವುಂಟಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಇಷ್ಟೆಲ್ಲಾ ಹಲ್ಲೆಯಾಗಿದ್ದರೂ ಕೂಡ ನನಗೆ ತಿಳಿದ ಪ್ರಕಾರ ಪೋಲೀಸರು ತಕ್ಷಣ ಹೋಗಲಿಲ್ಲ ಒಂಭತ್ತೂವರೆ ಗಂಟೆಗೆ ಕೊಲೆಯಾದಾಗ ಹತ್ತಿರದವರು ಯಾರೋ ಕಾರಿನಲ್ಲಿ ಆಸ್ಪತ್ರೆಗೆ ತೆಗೆದುಕೊಂಡುಹೋಗಿದ್ದಾರೆ. ಬೆಳಗಿನವರೆಗೆ ಜನ ಭಯಭೀತರಾಗಿ ಹೆಣ ನೋಡುವುದಕ್ಕೆ ಕೂಡ ಆಸ್ಪತ್ರೆಗೆ ಯಾರು ಹೋಗಲಿಲ್ಲ ಗುಲ್ಬರ್ಗದಂಥ ಅತೀ ದೊಡ್ಡ ಪಟ್ಟಣದಲ್ಲಿ ಕೊಲೆಯಾಗಿದ್ದರೂ ಹೆಣ ನೋಡುವುದಕ್ಕೆ ಜನ ತಯಾರಿಲ್ಲ ಹೆಂಡತಿ ಮತ್ತು ಮಗ ಮಾತ್ರ ಅಳುತ್ತಾ ಕುಳಿತಿದ್ದರೇ ಹೊರತು ಸಾರ್ವಜನಿಕರು ಹೆದರಿಕೆಯಿಂದ ಹೋಗಲಿಲ್ಲ. ನೋಡುವುದಕ್ಕೆ ಹೋದರೆ ಪೋಲಿಸರು ಹೆದರಿಸುತ್ತಾರೆಂಬ ಭಯ ಜನರಲ್ಲಿತ್ತು ಅಂಥ ದೊಡ್ಡ ಪಟ್ಟಣದ ಮಧ್ಯೆ ೪½ ಗಂಟೆಗೆ ಕೊಲೆಯಾದಾಗ ಒಂದು ಗಂಟೆ ಎರಡು ಗಂಟೆ ಹೊತ್ತಿಗೆ ಪೋಲಿಸರು ಹೋಗಿದ್ದಾರೆ ಹಾಗಾದರೆ ಇದರ ಕತೆ ಏನು ? ಇದರ ಅರ್ಥ ಏನು ? ಇಂಥ ಭೀಕರವಾದ ಕೊಲೆಯಾದರೂ ಕೂಡ ಸರ್ಕಾರ ಏತಕ್ಕೆ ಸುಮ್ಮನಿದೆ ? ಯಾರನ್ನೂ ಕೂಡ ಇನ್ನತ್ತಿನವರೆಗೂ ಹಿಡಿಯಲಿಲ್ಲ. ನಮಗೆ ಬಂದಿರುವ ವರ್ತಮಾನದ ಪ್ರಕಾರ ಇದುವರೆಗೆ ಒಬ್ಬರನ್ನೂ ಹಿಡಿಯಲಿಲ್ಲ. **Nobody has been apprehended,** ಅಷ್ಟು ನಿಸ್ಸಹಾಯಕವಾಗಿಧೆಯೇ ಈ ಸರ್ಕಾರ ? ಅಥವಾ ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತಿದೆಯೇ ? ಅಥವಾ ಕೊಲೆಗಡುಕರನ್ನು ಹಿಡಿಯತಕ್ಕ ಶಕ್ತಿ ಇಲ್ಲವೇ ? ಸರ್ಕಾರ ನಿರ್ವೀರ್ಯವಾಗಿ ಮೌನವಾಗಿ ಏತಕ್ಕೆ ಕುಳಿತಿದೆ ? ಇಂಥ ಘಟನೆಗಳು ನಡೆಯತಕ್ಕ ಸಂದರ್ಭದಲ್ಲಿ ಕಾರ್ಯಕಲಾಪಗಳನ್ನು ಹೇಗೆ ನಡೆಸಬೇಕು ? ಜನರ ಮನಸ್ಸಿನಲ್ಲಿ ಇವತ್ತು ಭಯ ಬಂದಿದೆ. ಚಾಕು ಚೂರಿ ಸಂಸ್ಕೃತಿಯನ್ನು

ಸಲ್ಲಿಸುತ್ತೇನೆ ಎಂದು ಹೇಳತಕ್ಕ ಸರ್ಕಾರ ಏನು ಮಾಡುತ್ತಿದೆ ? ಇಡೀ ಕರ್ನಾಟಕದಲ್ಲಿ ಚಾಕು ಚೂರಿ ಇವತ್ತು ತಾಂಡವವಾಡುತ್ತಿದ್ದು ಅಮಾಯಕರ ಬಲಿ ತೆಗೆದುಕೊಳ್ಳುತ್ತಿದೆ. ಅವರಿಗೆ ಕಕ್ಷೆ ಇಲ್ಲ. ಇಂಥ ಒಂದು ಅಶಾಂತಿಯ ವಾತಾವರಣದಲ್ಲಿ ಒಂದು ರೀತಿಯಾಗಿ ಸಂಪೂರ್ಣವಾಗಿ ನ್ಯಾಯದ ಸಂರಕ್ಷಣೆ ಇಲ್ಲದೇ ಇದಾಗ ಸದನದಲ್ಲಿ ಕುಳಿತು ಏನು ಮಾಡಬೇಕು ? ಅನೇಕ ಸದಸ್ಯರು ಇವತ್ತು ಬರುವುದಕ್ಕಾಗಲಿಲ್ಲ. ಏತಕ್ಕೆಂದರೆ ಭಯದ ವಾತಾವರಣ ಇದೆ ನಿನ್ನೆ ಕಂಡಕ್ಟರ್ ಕೊಲೆಯಾಗಿ ಬಸ್ಸುಗಳು ಓಡುತ್ತಿಲ್ಲ. ಇದನ್ನು ನಾನು ಸೈಡ್ ರೆಫರೆನ್ಸ್ ಆಗಿ ಹೇಳುತ್ತಿದ್ದೇನೆ. ಒಂದು ರೀತಿಯ ಭಯದ ವಾತಾವರಣ ಇಡೀ ಸಮಾಜದಲ್ಲಿ ಕರ್ನಾಟಕ ರಾಜ್ಯದಲ್ಲಿ ಬಂದಿರುವಾಗ ನನ್ನ ವಿನಂತಿ ಏನೆಂದರೆ ದಯಮಾಡಿ ಈ ವಿಚಾರವನ್ನು ವಿಸ್ತಾರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಸರ್ಕಾರವನ್ನು, ಪೋಲೀಸರನ್ನು ಮತ್ತು ಅಧಿಕಾರದಲ್ಲಿರತಕ್ಕವರನ್ನು ಟೀಕೆ ಮಾಡತಕ್ಕ ಪತ್ರಿಕಾ ಕರ್ತರಿಗೆ ಸದನದಲ್ಲಿ ಗೌರವಾನ್ವಿತ ಪೀಠದಲ್ಲಿ ಕುಳಿತುಕೊಂಡಿರತಕ್ಕ ಮಾನ್ಯ ಅಧ್ಯಕ್ಷರೆ ರಕ್ಷಣೆ ಕೊಡಬೇಕಾಗಿದೆ. ಇಲ್ಲದಿದರೆ ನಾವು ಟೀಕೆ ಮಾಡಿ ಹೊರೆಗೆ ಹೋದಾಗ ನಮ್ಮ ಮೇಲೂ ಹಲ್ಲೆ ಮಾಡುತ್ತಾರೆ. ಇದಕ್ಕೆ ರಕ್ಷಣೆ ಏನಿದೆ ? ಪತ್ರಿಕಾ ಕರ್ತರ ಸ್ವಾತಂತ್ರ್ಯ ಅಪಹರಣವಾಗಿದೆ. ಇದರಲ್ಲಿ ಸರ್ಕಾರದ ಸಂಚು ಕೂಡ ಇದೆಯೇನೋ ಎಂಬ ಶಂಕೆ ಇದೆ. ಅಮಾಯಕರಿಗೆ ಯಾವುದೇ ರಕ್ಷಣೆಯನ್ನೂ ಕೊಡದಿದ್ದರೆ ನಾವು ಏನು ತಿಳಿದುಕೊಳ್ಳಬೇಕು ? ಆದ್ದರಿಂದ ಇದರ ಬಗ್ಗೆ ವಿವರವಾಗಿ ಇವತ್ತು, ನಾಳೆ, ಎರಡು ಮೂರು ದಿನಸಗಳ ಕಾಲ ಸದನದಲ್ಲಿ ಚರ್ಚೆ ಮಾಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.--ಮೂರು ದಿವಸ ಸಾಕೆ ?

ಶ್ರೀ ಎಂ ವೀರಪ್ಪ ಮೊಯಿಲಿ.—ಒಂದು ವಾರ ಆಗಲಿ. ಇವತ್ತು ಸಮಾಜದಲ್ಲಿ ನೆಮ್ಮದಿ, ಶಾಂತಿ ಇಲ್ಲದೇ ಇದರೆ, ಸರ್ಕಾರವೇ ಇಲ್ಲದಿದ್ದರೆ ಆರ್ಥಿಕವಾಗಿ, ಸಾಮಾಜಿಕವಾಗಿ ಜನರನ್ನು ಎತ್ತಿಹಿಡಿಯತಕ್ಕ ಪ್ರಶ್ನೆಯೇ ಉದ್ಭವಿಸುವುದಿಲ್ಲ, ನೆಮ್ಮದಿಯಾದ ವಾತಾವರಣ ಇದಾಗ ಮಾತ್ರ ಆರ್ಥಿಕವಾಗಿ ಸಾಮಾಜಿಕವಾಗಿ ಸಮಾಜ ಮುಂದೆ ಬರಬಹುದೇ ಹೊರತು ಇಲ್ಲದಿದ್ದರೆ ಆಗುವುದಿಲ್ಲ. ಆದ್ದರಿಂದ ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಡಬೇಕು. ಚರ್ಚೆಯಾಗಬೇಕು ಸರ್ಕಾರದಿಂದ ಉತ್ತರ ಬರಬೇಕು. ಸಾರ್ವಜನಿಕರಲ್ಲಿರುವ ಭೀತಿ ವಾತಾವರಣ ಪರಿಹಾರ ಮಾಡತಕ್ಕ ದಿಟ್ಟ ನಿಲುವನ್ನು ತೆಗೆದುಕೊಳ್ಳಬೇಕು. ನಿಲುವಳಿ ಸೂಚನೆಗೆ this is the fittest case ನಾವು ಇದರ ಬಗ್ಗೆ ಚರ್ಚೆ ಮಾಡಿ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಸಮಾಜಕ್ಕೆ ನ್ಯಾಯ ಒದಗಿಸುವುದಕ್ಕಾಗುವುದಿಲ್ಲ. ನನ್ನ ಗೆಳೆಯರೂ ಕೂಡ ನೋಟೀಸ್ ಕೊಟ್ಟಿದ್ದು ಅವರೂ ಈ ವಿಷಯದಲ್ಲಿ ಮಾತನಾಡುತ್ತಾರೆ. ಆದರಿಂದ ನಿಲುವಳಿ ಸೂಚನೆಗೆ ಅನುಮಾನ ನೀಡಬೇಕೆಂದು ಕೇಳಿಕೊಂಡು ಈ ವಿಚಾರವನ್ನು ಎತ್ತುವುದಕ್ಕೆ ಅನುಮತಿಯನ್ನು ನೀಡಿದ್ದಕ್ಕಾಗಿ ಮಾನ ಅಧ್ಯಕ್ಷರಿಗೆ ವಂದಿಸುತ್ತೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್ (ಕಮಲಾಪುರ).—ಮಾನ್ಯ ಅಧ್ಯಕ್ಷರೇ, ನಾನು ಮತ್ತು ನವಲ್ಲಿ ಸ್ನೇಹಿತರು ನಿಯಮ 54 ಹಾಗೂ 60ರ ಕೆಳಗೆ ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ಇದರಲ್ಲಿ ನಾನು ಬೇರೆ ಸೂಚನೆಯನ್ನು ಕೊಟ್ಟಿದ್ದೇನೆ. ಆ ಸೂಚನೆ ಈ ರೀತಿ ಇದೆ.

"ಮಂಳವಾರ ದಿನಾಂಕ 14ನೇ ಫೆಬ್ರವರಿ 1984 ರಂದು ರಾತ್ರಿ 10-30 ಗಂಟೆ ಸುಮಾರಿಗೆ ಗುಲ್ಬರ್ಗದ ಕನ್ನಡ ದಿನ ಪತ್ರಿಕೆ ಕ್ರಾಂತಿ, ಸಂಪಾದಕರಾಗಿದ್ದ ಶ್ರೀ ಸಿದ್ಧರಾಮೇಶ್ ಮುದೋಳ್ ಅವರ ಕೊಲೆಯಾಗಿದೆ ಇದು ಕಗ್ಗೊಲೆ. ಈ ಭೀಕರ ಕೊಲೆ ಮುಖ್ಯರಸ್ತೆ ಬಸ್‌ಸ್ಟ್ಯಾಂಡ್‌ನಿಂದ ಸ್ವಲ್ಪ ದೂರದಲ್ಲಿಯೇ ಹೌಸಿಂಗ್ ಬೋರ್ಡ್ ಕಾಲೋನಿಯ ಹತ್ತಿರ ಆಗಿದೆ. ಸಮಾಜದಲ್ಲಿ ಒಬ್ಬ ಪ್ರತಿಷ್ಠಿತ ವ್ಯಕ್ತಿಯಾಗಿದ್ದ ಶ್ರೀ ಸಿದ್ಧರಾಮೇಶ್ ಅವರ ಕೊಲೆ ಗುಲ್ಬರ್ಗಾ ನಗರ ಮಾತ್ರವಲ್ಲದೆ ಇಡೀ ರಾಜ್ಯದಲ್ಲಿಯೇ ಕಳವಳವನ್ನುಂಟುಮಾಡಿದೆ ಗುಲ್ಬರ್ಗಾನಗರದಲ್ಲಿಯ ಜನರು ಭಯ ಭೀತರಾಗಿದ್ದಾರೆ. ಈಕೊಲೆ ಪತ್ರಿಕಾ ಸ್ವಾತಂತ್ರ್ಯ ಮತ್ತು ಪತ್ರಿಕಾರಂಗದ ಮೇಲೆ ಆಗಿರತಕ್ಕಂತಹ ಕೊಲೆ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಆದುದರಿಂದ ಇದರ ಬಗ್ಗೆ ಜರೂರಾಗಿ ಚರ್ಚೆ ಆಗಬೇಕಾದ್ದು ಅತ್ಯವಶ್ಯವಾಗಿದೆ, ಈ ಘಟನೆ ಪೋಲೀಸ್ ಮತ್ತು ಸರ್ಕಾರದವರ ವೈಫಲ್ಯವನ್ನು ಎತ್ತಿ ತೋರಿಸುತ್ತದೆ. ಅದಕ್ಕಾಗಿ ಇವತ್ತೇ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವುದು ಅನಿವಾರ್ಯ.".

ಈ ರೀತಿ ನಾನು ಸೂಚನೆಯನ್ನು ಕಳುಹಿಸಿದ್ದೇನೆ. ಈ ವಿಷಯದ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಕೆಲವು ಅಂಶಗಳನ್ನು ಹೇಳಿದ್ದು ನಾನು ಅದಕ್ಕೆ ಹೋತಾಗಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿ ಈ ವಷಯವನ್ನು ಈ ಸದನದಲ್ಲಿ ಚರ್ಚೆ ಮಾಡಲು ಎಷ್ಟು ಜರೂರು ಇದೆ ಎಂಬುದರ ಬಗ್ಗೆ ತಮ್ಮ ಮನವೊಲಿಸಲು ಪ್ರಯತ್ನ ಮಾಡುತ್ತೇನೆ. ಇವತ್ತಿನ ದಿವಸ ಏನು ಸಿದ್ಧರಾಮೇಶ್ವರ ಅವರ ಕೊಲೆ ಆಗಿನ್ನ ಅದು ಪತ್ರಿಕಾರಂಗದ ಮೇಲೆ ಆಗಿರತಕ್ಕ ಕೊಲೆ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇವತಿದೆ

ದಿವಸ ಈ ಪತ್ರಿಕಾರಂಗ fourth estate in democracy ಎಂದು ಹೇಳಿದರೆ ತಪ್ಪಾಗಲಾರದು ನ್ಯಾಯಾಂಗ, ಶಾಸಕಾಂಗ ಹಾಗೂ ಕಾರ್ಯಾಂಗದಂತೆ ಇವತ್ತಿನ ಪ್ರಜಾಪ್ರಭುತ್ವದಲ್ಲಿ ಪತ್ರಿಕಾರಂ ನಾಲ್ಕನೇ ಸ್ಥಾನ ಪಡೆಯುತ್ತದೆಂದು ನಾನು ಹೇಳುತ್ತೇನೆ. ಈ ಪತ್ರಿಕಾರಂಗಕ್ಕೂ ಆ ಮೂರು ಅಂಗಗಳಷ್ಟೇ ಜವಾಬ್ದಾರಿ ಇದೆ. ಆದರೆ ಇವತ್ತಿನ ದಿವಸ ಪತ್ರಿಕಾರಂಗದ ಮೇಲೆ ಕೊಲೆಯಾಗಿರುವುದು ಒಂದು ಗಂಭೀರವಾದ ವಿಷಯವಾಗಿದೆ. ಸಿದ್ಧರಾಮೇಶ್ವರ ಅವರು ಸುಮಾರು 22 ವರ್ಷಗಳ ಹಿಂದೆ ಗುಲ್ಬರ್ಗಾಕ್ಕೆ ಬಂದರು ಇದಕ್ಕೂ ಮುಂಚೆ ಇವರೂ ಹುಬ್ಬಳ್ಳಿಯಲ್ಲಿ ಪಾಟೀಲ್ ಪುಟ್ಟಪ್ಪನವರ 'ಪ್ರಪಂಚ', ಹಾಗೂ 'ವಿಶ್ವವಾಣಿ' ಪತ್ರಿಕೆಗಳಲ್ಲಿ ಕೆಲಸ ಮಾಡಿ ಅವರ ಬೆಂಬಲಕ್ಕೆ ತರಪೇತಿ ಪಡೆದು ತಮ್ಮ ಸ್ವಂತ ಪತ್ರಿಕೆಯನ್ನು ಪ್ರಾರಂಭ ಮಾಡಿದರು. ಇವತ್ತು ಯಾವ ಪಕ್ಷ ಅಥವಾ ಯಾವ ಜನ ಎಂಬ ಬಗ್ಗೆ ಬೇಧಭಾವ ತೋರದೇ ನಿರ್ಭೀತಿಯಿಂದ ಬಹಳ ಕಟುವಾಗಿ ಎಲ್ಲರನ್ನೂ ಟೀಕಿಸುತ್ತಿದ್ದರು. ಯಾವುದೇ ಪಕ್ಷ ಅಡಳಿತದಲ್ಲಿ ಇರಲಿ ಅಥವಾ ವಿರೋಧ ಪಕ್ಷವಾಗಿರಲಿ ತಪ್ಪು ಮಾಡಿದರೆ ಅದನ್ನು ಅವರು ಟೀಕೆ ಮಾಡುತ್ತಿದ್ದರು. ತಪ್ಪು ಮಾಡಿದವರೆಲ್ಲರಿಗೂ ಟೀಕೆ ಮಾಡಿ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದರು. ಇವತ್ತಿನ ದಿವಸಕ್ಕೆ ಪತ್ರಿಕಾ ಸ್ವಾತಂತ್ರ್ಯಕ್ಕೆ ಭದ್ರರಾಗಿ ಜನರ ತಪ್ಪನ್ನು ಎತ್ತಿ ತೋರಿಸುತ್ತಾ ತಮ್ಮ ಸೇವೆಯನ್ನು ಸಲ್ಲಿಸಿದಂತಹವರ ಕೊಲೆಯಾಗಿದೆ. ಈ ಒಂದು ಕೊಲೆ ಹೇಗೆ ಆಯಿತು ? ಈ ಒಂದು ಕೊಲೆಗೆ ಪ್ರೀಪ್ಲಾನ್ ಇದೆ. ಇದು ಒಂದು ಪ್ರೀಡಿಟಿರ್ಮಿನ್ಡ್ ಕೊಲೆ ಎಂದು ಹೇಳಬಹುದು. ಅವರು ಎಷ್ಟು ಗಂಟೆಗೆ ತಮ್ಮ ಆಫೀಸಿನಿಂದ ಹೊರಡುತ್ತಾರೆ ಯಾವ ರಸ್ತೆಯಲ್ಲಿ ಬರುತ್ತಾರೆ, ಎಲ್ಲಿ ಟರ್ನ್ ತೆಗೆದುಕೊಳ್ಳುತ್ತಾರೆ, ಹಾಗೂ ಅವರಿಗೆ ಹೇಗೆ ಹೊಡೆಯಬೇಕು ಎಂಬುದನ್ನೆಲ್ಲಾ ಬಹಳ ದಿವಸಗಳಿಂದ ಯೋಜನೆ ಮಾಡಿ ಕೊಲೆ ಮಾಡಿದ್ದಾರೆ. ಆ ಕೊಲೆ ಆದಾಗ ನಾನು ಗುಲ್ಬರ್ಗಾದಲ್ಲಿ ಇದ್ದೆ. ಮಂಗಳವಾರ ರಾತ್ರಿ ಸುಮಾರು ರಾತ್ರಿ 10 ಗಂಟೆ ಸಮಯದಲ್ಲಿ ಅವರು ತಮ್ಮ ಆಫೀಸನ್ನು ಬಿಟ್ಟು ಬಂದಿದ್ದಾರೆ. ಬಸ್ ನಿಲ್ದಾಣದ ಹತ್ತಿರ ಸುಮಾರು 300 ಅಡಿ ಹತ್ತಿರದಲ್ಲಿ ಒಂದು ತಿರುವು ಬರುತ್ತದೆ. ಅಲ್ಲಿ ಇವರ ಕಾರನ್ನು ಒಬ್ಬ ಸೈಕಲ್ ಮೇಲೆ ಬಂದ ಮನುಷ್ಯ ಅಡ್ಡಕ್ಕೆ ನಿಲ್ಲಿಸುತ್ತಾನೆ. ಸೈಕಲನ್ನು ಅಡ್ಡ ನಿಲ್ಲಿಸಿದಾಗ ಕಾರನ್ನು ನಿಲ್ಲಿಸಿ ಇವರು ಹೊರಗೆ ಬಂದಾಗ ಸುಮಾರು ರೋಡ್‌ನಿಂದ 10 ಅಡಿ ದೂರಕ್ಕೆ ಅವನನ್ನು ಎಳೆದುಕೊಂಡು ಹೋಗಿ ಜೋರಾಗಿ ಸ್ಟೈನಲ್ ಕಾರ್ಡಗೆ ಏಟು ಬೀಳುವಂತೆ ಹೊಡೆದು ಕೊಲೆ ಮಾಡಿದ್ದಾರೆ. ಆ ಹತ್ತಾವರೆ ರಾತ್ರಿಯ ಕಗ್ಗತ್ತಲಿನಲ್ಲಿ ಆತ ಪ್ರಾಣ ರಕ್ಷಣೆಗಾಗಿ ಕೂಗಿಕೊಳ್ಳುತ್ತಾನೆ. ಅಲ್ಲಿ ಯಾರು ಕೂಡ ಹೊರಗೆ ಬರಲು ಭಯಪಡುವ ಸಮಯವಾಗಿರುತ್ತದೆ. ಅಲ್ಲಿ ನನ್ನ ಸ್ನೇಹಿತರಾದ ಅಣ್ಣಾರಾವ್ ಬಂಡ್ವಾಡ್ ಎಂಬುವರ ಮನೆ ಇದ್ದು ಅಲ್ಲಿನ ಕಿರುಚಾಟವನ್ನು ನೋಡಿ ಅವರ ಮನೆಯ ಸೇವಕ ಹೊರಕ್ಕೆ ಬರುತ್ತಾನೆ. ಅವನು ಹೊರಗೆ ಬಂದಾಗ 10-15 ಜನ ಆತನನ್ನು ಹೊಡೆಯುತ್ತಿರುವುದನ್ನು ನೋಡಿ ಭಯಪಟ್ಟು ಮತ್ತೆ ಒಳಕ್ಕೆ ಹೋಗಿ ಮಾಲೀಕ ಬಂಡೆವಾಡ್ ಅವರನ್ನು ಕರೆದುಕೊಂಡು ಹೊರಗೆ ಬಂದಾಗ ಕೊಲೆಗಡುಕರು ಓಡಿಹೋಗುತ್ತಾರೆ ಮತ್ತು 20-30 ಅಡಿ ದೂರದಲ್ಲಿ ಜನ ನಿಂತು ನೋಡುತ್ತಿರುತ್ತಾರೆ. ಆಗ ಬಂಡ್ವಾಡ್ ಅವರು ಈತನನ್ನು ಆಸ್ಪತ್ರೆಗೆ ಸೇರಿಸಲು ಸಹಾಯ ಕೇಳಿ ಇವರನ್ನು ಕಾರಿನೊಳಕ್ಕೆ ಕೂರಿಸುವ ಪ್ರಯತ್ನ ಮಾಡುತ್ತಾರೆ. ಆದರೆ ಯಾರು ಕೂಡ ಸಹಾಯಕ್ಕೆ ಬರುವುದಿಲ್ಲ. ಆದರೆ ಅವರೇ ಕಷ್ಟಪಟ್ಟು ಅವರನ್ನು ಆಸ್ಪತ್ರೆಗೆ ಸಾಗಿಸಿದ್ದಾರೆ. ಆದರೆ ಆಸ್ಪತ್ರೆಗೆ ಸಾಗಿಸಿದ ಕೆಲವೇ ನಿಮೀಷದಲ್ಲಿ ಸಿದ್ಧರಾಮೇಶ್ವರ ಅವರ ಪ್ರಾಣ ಹೋಗಿದೆ. ಉದ್ದೇಶ ಪೂರ್ವಕವಾಗಿಯೇ ಪತ್ರಿಕಾ ರಂಗವನ್ನು ಹತ್ತಿಕ್ಕಬೇಕೆನ್ನುವ ಉದ್ದೇಶದಿಂದ ಈ ಕಗ್ಗೊಲೆಯನ್ನು ಮಾಡಿರಬಹುದು ಎಂಬುದಕ್ಕೆ ಯಾವ ಸಂಶಯವೂ ಕಾಣುವುದಿಲ್ಲ. ಪತ್ರಿಕಾ ರಂಗದ ಮೇಲೆ ನಾನು ಏಕೆ ಹೇಳುತ್ತಿದ್ದೇನೆಂದರೆ, ಮಾನ್ಯ ಸಿದ್ಧರಾಮೇಶ್ವರ ಅವರು ಯಾವಾಗಲೂ ಒಂದು ಮಾತನ್ನು ಹೇಳುತ್ತಿದ್ದರು. ನಾನು ಸತ್ಯಕ್ಕಾಗಿ ಜನಿಸಿದ್ದೇನೆ, ಸತ್ಯಕ್ಕಾಗಿ ಬಡಿದಾಡುತ್ತೇನೆ ಸತ್ಯಕ್ಕಾಗಿ ಕೆಲಸ ಮಾಡುತ್ತೇನೆ, ಸತ್ಯಕ್ಕಾಗಿ ಸಾಯುತ್ತೇನೆ, ಎಂಬ ಮಾತನ್ನು ತಮ್ಮ ಪತ್ರಿಕೆಗಳಲ್ಲಿ ಪ್ರಕಟ ಮಾಡಿದ್ದಾರೆ. ಇವತ್ತಿನ ದಿವಸ ಸತ್ಯಕ್ಕಾಗಿ ಅವರು ತಮ್ಮ ಪ್ರಾಣವನ್ನೇ ತೆತ್ತಿದ್ದಾರೆ. ಇವತ್ತು ಸತ್ಯಕ್ಕಾಗಿ ಒಬ್ಬ ಮನುಷ್ಯನ ಕೊಲೆ ಆಗಿದೆ. ಇವತ್ತಿನ ದಿವಸ ಇಡೀ ಗುಲ್ಬರ್ಗಾ ಜಿಲ್ಲೆಯ ಜನರು ಭಯಭೀತರಾಗಿದ್ದಾರೆ. ಇವತ್ತಿನ ದಿವಸ ಇಡೀ ರಾಜ್ಯದಲ್ಲಿ ಇವರ ಕೊಲೆ ಬಗ್ಗೆ ಜನ ಗಾಬರಿಗೊಂಡಿದ್ದಾರೆ. ಇದೆಲ್ಲಾ ಆಗಬೇಕಾದರೆ ಇದರಲ್ಲಿ ಏನು ಇರಬಹುದು ಎಂಬುದನ್ನು ತಾವು ಯೋಚನೆ ಮಾಡಬೇಕು. ಪ್ರಜಾಪ್ರಭುತ್ವದಲ್ಲಿ ಪತ್ರಿಕೆಗಳ ಪಾತ್ರ ಬಹಳ ಮಹತ್ವದಾದುವೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಜನತಾ ಸರ್ಕಾರ ಅಧಿಕಾರಕ್ಕೆ ಬಂದಾಗ ಪತ್ರಿಕಾ ರಂಗಕ್ಕೆ ಎನ್‌ಕರೇಜ್ ಕೊಡುತ್ತೇವೆ ಎಂದು ಹೇಳಿತ್ತು. ಆದರೆ ಈ ಬಗ್ಗೆ ಅವರಿಗೆ ಬರೀ ಬಸ್ ಪಾಸ್ ಕೊಟ್ಟು ಅವರ ಜೀವನವನ್ನು ಮಾಡಲೇ ಹೋದರೆ ಇಂತಹ ಮುಖಾಳತನದ ಕೆಲಸ ಇನ್ನೊಂದು ಇಲ್ಲ ಎಂದು ಹೇಳಬೇಕಾಗುತ್ತದೆ. ತಮ್ಮ ಸರ್ಕಾರ ಅಧಿಕಾರಕ್ಕೆ ಬರುವುದಕ್ಕೆ ಪತ್ರಿಕಾಕರ್ತರೇ ಬಹಳ ಮಟ್ಟಿಗೆ ಕಾರಣ

ಕರ್ತರು. ನನಗೆ ನೆನಪಿರುವ ಹಾಗೆ ಪತ್ರಿಕಾ ವರದಿಗಾರರ ಮೇಲೆ ಇದು 2ನೇ ಬಾರಿ ಭೀಕರ ಕೊಲೆ ಆಗಿರುವುದು. ಮೊದಲನೆಯದಾಗಿ ಮಂಗಳೂರಿನಲ್ಲಿ ಕೆಲವು ದಿನಗಳ ಹಿಂದೆ ಆಗಿದೆ. ಅದಕ್ಕೆ ರಾಜಕೀಯ ಕಾರಣ ಇರಬಹುದೆಂದು ಹೇಳುತ್ತಿದ್ದಾರೆ. ಅದು ಮಂಗಳೂರಿನಲ್ಲಿ ಆಗಿರುವುದರಿಂದ ಅದರ ವಿಷಯ ನನಗೆ ಅಷ್ಟಾಗಿ ಗೊತ್ತಿಲ್ಲ. ಆದರೆ ಗುಲ್ಬರ್ಗಾದಲ್ಲಿ ಪತ್ರಿಕಾ ಸಂಪಾದಕರ ಮೇಲೆ ಕೊಲೆ ಆಗಿದೆ ಈ ಕೊಲೆ ಆಗಿರುವುದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ? ಪತ್ರಿಕಾಕರ್ತರು ಎಲ್ಲರನ್ನೂ ಟೀಕೆ ಮಾಡುತ್ತಾರೆ ಈ ಬಗ್ಗೆ ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ ದಿನಾಂಕ 19-2-1984 ಲಂಕೇಶ್ ಪತ್ರಿಕೆಯಲ್ಲಿ ,,ನುತ್ತೆ ಅದೇ,, ಎಂಬ ತಲೆ ಬರಹದಲ್ಲಿ ಒಂದು ಸುದ್ದಿ ಈ ರೀತಿ ಇದೆ.

> ''ಹೆಗಡೆ ಮುಂತಾದ ಆವಿವೇಕಿ ಶೋಂಭೇರಿಗಳು ಕೂಡಲೇ ಎಚ್ಚರಗೊಂಡು ತಡೆಹಾಕದಿದ್ದರೆ ಇವರೆಲ್ಲ ಭ್ರಷ್ಟತೆಯಲ್ಲಿ ಕೊಚ್ಚಿ ಹೋಗಲಿದ್ದಾರೆ. ಮಂತ್ರಿಯೊಬ್ಬ ತಮ್ಮ ಅನುಯಾಯಿಯನ್ನು ಬೋರ್ಡ್ ಒಂದರ ಅಧ್ಯಕ್ಷಗಿರಿಗೆ ಶಿಫಾರ್ಸು ಮಾಡುತ್ತಾ ಹೇಳಿದ್ದು ಅರ್ಥಪೂರ್ಣವಾಗಿದೆ : • ಆತ ಭೂಸಾ ಯ ಮಂಡಲಿಯ ಸದಸ್ಯನಾಗಿರೋದು ನಿಜಾರಿ. ಆದರೆ ಅಲ್ಲಿ ಉಳಿದಿರೋದು ನಾಲ್ಕೈದು ಕೇಸುಗಳು. ಅದರಲ್ಲೇನು ಸಿಕ್ಕೀತು ? ಕೈ ಬಾಯಿಗೆ ಒಂದಿಷ್ಟು ದಕ್ಕುವ ಛೇರ್ಮನ್ನಾಗಲಿ ಬಿಡ್ರಿ. ಹಿಂದೆ ಪ್ರೈಮರಿ ಶಾಲೆಯ ಮೇಷ್ಟ್ರು ಕೆಲಸಕ್ಕೆ ಕಾಂಗೆ ಗಳು ಐದಾರು ಸಾವಿರ ತೆಗೆದು ಕೊಳ್ಳುತ್ತಿದ್ದರೆ ಆಗ ಅದು ಹತ್ತು ಹದಿನೈದು ಸಾವಿರ ತಲುಪುತ್ತಿರುವ ಸುದ್ದಿ ಎಲ್ಲೆಲ್ಲೂ ಹಬ್ಬುತ್ತಿದೆ ಪೊನ್ನೆ ಜನತಾ ಪಕ್ಷದ ಗಣ್ಯರಲ್ಲಿ ಒಬ್ಬನಾಗಿ ಜನಾಯಿತನಾವ ಮನುಷ್ಯನೇನುಕಾತಿ ಮಂಡಳಿಯ ಅಧ್ಯಕ್ಷಗಿರಿ ಬಿಡಲು ನಿರಾಕರಿಸುತ್ತಾ ಮನಸ್ಸಿನಲ್ಲೇ ಲಂಚದ ನಾಣ್ಯ ಎಣಿಸುತ್ತಿದುದು ಈಗ ಕೇವಲ ಸುದ್ದಿಯಾಗಿ ಉಳಿದಿಲ್ಲ. ಹೋಬಳಿ, ತಾಲ್ಲೂಕು ಮಟ್ಟದ ಪ್ರಜಾರಿಗಳು, ಅಧಿಕಾರಿಗಳು ಭ್ರಷ್ಟತೆಯ ಅಳಕ್ಕೆ ಇಳಿಯತೊಡಗಿದ್ದಾರೆ.

ಈ ರೀತಿಯಾಗಿ ಅವರು ತಮ್ಮ ಅಭಿಪ್ರಾಯವನ್ನು ಬರೆದಿದ್ದಾರೆ. ಇದರಿಂದ ಜನತಾ ಸರ್ಕಾರದವರು ಏನು ತಿಳಿದುಕೊಳ್ಳಬೇಕು ? ಇದರಿಂದ ಕೊಲೆ ಮಾಡುವ ಮಟ್ಟಕ್ಕೆ ಹೋಗಬೇಕೇ ? ಇದು ಒಂದು ಉದಾಹರಣೆ ಅಷ್ಟೇ. ಎರಡೂ ಕಡೆಯೂ ಇವರು ಬರೆದಿದ್ದಾರೆ.

Sri. P. RAMDEV.—What are you suggesting ?

10-00 A M.

ಶ್ರೀ ಗೋವಿಂದ ಪಿ. ಒಡೆಯರಾಜ್.—ಪತ್ರಿಕೆಯವರು ಎಷ್ಟರಮಟ್ಟಿಗೆ ಬರೆಯುತ್ತಿದ್ದಾರೆಂಬುದು ತನುಗೆ ಅರ್ಥವಾಗಲಿ ಮತ್ತು ತಿಳಿಯಲಿ ಎಂದು ನಾನು ಇದನ್ನೆಲ್ಲಾ ಓದಿ ಹೇಳುತ್ತಿದ್ದೇನೆ ಈ ರೀತಿ ಬರೆಯುತ್ತಾರೆಂಬ ಕಾರಣದಿಂದಲೇ ಕೊಲೆಯಾದರೆ ಹೇಗೆ ಇದನ್ನು ತಪ್ಪಿಸಲು ನೀವು ಇದಿರಾ ? ಶ್ರೀ ಸಿದ್ಧರಾಮೇಶ್ ಅವರು ನವೆಂಬರ್ ತಿಂಗಳಲ್ಲಿ ಬೆಂಗಳೂರಿಗೆ ಬಂದಾಗ ತಮ್ಮ ಪ್ರಾಣಕ್ಕೆ ಅಪಾಯವಿದೆ, ತಮಗೆ ರಕ್ಷಣೆ ಕೊಡಿಸಬೇಕೆಂದು ಮುಖ್ಯಮಂತ್ರಿಗಳಿಗೆ ಮತ್ತು ರಾಜ್ಯಪಾಲರಿಗೆ ಅರ್ಜಿಗಳನ್ನು ಕೊಟ್ಟಿದ್ದಾರೆ ಮತ್ತು ಪ್ರೆಸ್ ಕಾನ್‌ಫರೆನ್ಸ್ ಮೂಲಕ ತಾವೂ ತಮಗೆ ರಕ್ಷಣೆ ಬೇಕೆಂದು ಕೇಳಿಕೊಂಡಿದ್ದಾರೆ ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ತಾವು ಮಾತನಾಡುತ್ತೀರಿ. ಆದರೆ ಇವರಿಗೆ ಕೊಟ್ಟ ರಕ್ಷಣೆಯಾದರೂ ಏನು ? ರಕ್ಷಣೆ ಕೊಡುವುದು ನಿಮ್ಮ ಕರ್ತವ್ಯವಲ್ಲವೇ ? ನೀವು ಪತ್ರಿಕಾರಂಗದ ಕೊಲೆ ಮಾಡಿವುದಾದರೆ ಪತ್ರಿಕಾರಂಗದವರು ನಿಮಗೆ ಏತಕ್ಕೆ ಸಪೋರ್ಟ್ ಮಾಡಬೇಕು ? ಇಂತಹ ಒಂದು ಭಾವನೆ ನಿಮ್ಮಲ್ಲಿರಬಾರದು ಇದು ಸರ್ಕಾರದ ಮತ್ತು ಪೋಲೀಸರ ಒಂದು ವೈಫಲ್ಯವನ್ನು ಎತ್ತಿ ತೋರಿಸುತ್ತದೆ. ಶ್ರೀ ಸಿದ್ಧರಾಮೇಶ್ ಅವರ ಜೀವಕ್ಕೆ ಅಪಾಯವಿದೆ ಎಂದು ಬೇರೆಯವರು ಮತ್ತು ನಾವು ಇಲ್ಲಿ ಸಾರಿ ಸಾರಿ ಹೇಳಿದ್ದೇವೆ. ಅವರೇ ಸ್ವತಃ ಹೇಳಿದ್ದಾರೆ. ಆದರೆ ತಾವು ಏನು ಕ್ರಮ ತೆಗೆದುಕೊಂಡಿರಿ ? ಇವರಿಗೆ ರಕ್ಷಣೆ ಕೊಡುವುದು ಪೋಲೀಸರ ಕರ್ತವ್ಯವಾಗಿತ್ತು. ಆದರೆ ಅವರು ಕೊಡಲಿಲ್ಲ. ಪೋಲೀಸರು ಇದ್ದಾರೋ ಅಥವಾ ಇಲ್ಲವೋ ಎಂಬುದನ್ನು ನಾನು ಈಗ ಹೇಳುವುದಿಲ್ಲ. ಆದರೆ ಇಂತಹ ವಿಚಾರ ಬಂದಾಗ ನಿಮ್ಮ ಜವಾಬ್ದಾರಿ ಇನ್ನೂ ಡಿಯಾಗುತ್ತದೆ ಮತ್ತು ನೂರ್ಮಡಿಯಾಗುತ್ತದೆ. ಆದರೂ ಸಹ ತಮ್ಮ ಕರ್ತವ್ಯಪಾಲನೆಯಲ್ಲಿ ಹೇಡಿಗಳಾಗಿದ್ದೀರಿ ಮತ್ತು ಅಸಮರ್ಥರಾಗಿದ್ದೀರಿ ಎಂದು ಹೇಳಬಹುದು. ಪತ್ರಿಕಾ ಸಂಪಾದಕರೊಬ್ಬರೇ ರಕ್ಷಣೆ ಇಲ್ಲದೆ ಕೊಲೆಯಾಗಬೇಕಾದರೆ ಇನ್ನು ಸಾಮಾನ್ಯ ಜನರ ಗತಿ ಏನು ? ಜನರಿಗೆ ತಾವು ಯಾವ ರೀತಿ ರಕ್ಷಣೆ ಕೊಡುತ್ತೀರಿ ? ತಾವು ಯಾರಿಗೆ ರಕ್ಷಣೆ ಕೊಡುತ್ತಿದ್ದೀರಿ ? ಎಲ್ಲರಿಗೂ ರಕ್ಷಣೆ ಕೊಡುವುದು ನಿಮ್ಮ ಕರ್ತವ್ಯವಲ್ಲವೇ ? ಈ ಭೀಕರ ಕೊಲೆ ಬಗ್ಗೆ ಸತ್ಯಾಂಶ ಹೊರ ಬರಲೇಬೇಕು. ಈ ಕೊಲೆ ಸಂಬಂಧವಾಗಿ ಇಲ್ಲಿಯವರೆಗೆ ಯಾರನ್ನೂ ಸಹ ಬಂಧಿಸಿಲ್ಲ ಇದಕ್ಕೆ ಕಾರಣವೇನು ? ಎವಿಡೆನ್ಸ್ ಏನೂ ಸಿಕ್ಕದ ರೀತಿಯಲ್ಲಿ ಕೊಲೆ ನಡೆದಿದೆ. ಯಾವ ಸುಳಿವು ಸಿಕ್ಕದ ರೀತಿಯಲ್ಲಿ ಕೊಲೆ ಮಾಡಿದ್ದಾರೆ. ಇಂತಹ ಶಕ್ತಿ

ಸಾಮರ್ಥ್ಯ ಯಾರಿಗಿದೆ ? ಸರ್ಕಾರದ ಒಂದು ನಿಷ್ಕ್ರಿಯತೆಯಿಂದ ಹಾಗೂ ಕರ್ತವ್ಯಲೋಪದಿಂದ ಇದು ನಡೆದಿದೆ. ಸಾಮಾನ್ಯ ಜನರ ಕೊಲೆ ನಡೆದಾಗ ಪೋಲೀಸರು ಎಷ್ಟೋ ಜನರನ್ನು ಬಂಧಿಸುತ್ತಾರೆ. ಆದರೆ ಇಂತಹ ಭೀಕರ ಕೊಲೆಯಾದಾಗ ಆದರಲ್ಲಿಯೂ ವಿಭಾಗ ಮಟ್ಟದ ಕೇಂದ್ರಸ್ಥಳದಲ್ಲಿ ರಾತ್ರಿವೇಳೆ ನಡೆದ ಕೊಲೆಯ ಬಗ್ಗೆ ಒಬ್ಬರೂ ಸಹ ಇಲ್ಲಿಯವರೆಗೆ ಸಾಕ್ಷಿ ಹೇಳಲು ಮುಂದೆ ಬರಲಿಲ್ಲವೆಂದರೆ ಇವರು ಯಾವ ರೀತಿ ಕೆಲಸ ಮಾಡುತ್ತಿದ್ದಾರೆಂಬುದನ್ನು ತಿಳಿದುಕೊಳ್ಳಬಹುದು. ಈ ಬಗ್ಗೆ ಕೂಲಂಕುಷವಾಗಿ ವಿಚಾರಣೆಯಾಗಬೇಕು ಸತ್ಯ ಹೊರ ಬರಬೇಕು. ಈಗ ನಡೆಯುತ್ತಿರುವ ಸಿ ಓ. ಡಿ. ತನಿಖೆಯಲ್ಲಿ ನನಗೆ ನಂಬಿಕೆಯಿಲ್ಲಾ ಏಕೆಂದರೆ ಸಿ ಒ. ಡಿ. ಕೂಡ ಪೋಲೀಸ್ ಇಲಾಖೆಯ ಒಂದು ಭಾಗವಾಗಿದೆ. ಈ ಪತ್ರಿಕಾ ಸಂಪಾದಕರಿಗೆ ರಕ್ಷಣೆ ಕೊಡಲು ಪೋಲೀಸರಿಗೆ ಸಾಧ್ಯವಾಗದಿರಬೇಕಾದರೆ ಇನ್ನು ಇವರು ತನಿಖೆ ಯಾವ ರೀತಿ ಮಾಡುತ್ತಾರೆ ? ಆದ್ದರಿಂದ ಸತ್ಯಾಂಶ ಹೊರಬರಲು ಈ ಸದನದ ಒಂದು ಸಮಿತಿಯನ್ನು ನೇಮಕ ಮಾಡಬೇಕು. ಈ ಸಮಿತಿಯವರು ವರದಿ ಕೊಟ್ಟಮೇಲೆ ಸಿ. ಬಿ. ಐ. ಮೂಲಕ ತನಿಖೆ ಮಾಡಿಸಲು ಸಾಧ್ಯವಾಗುತ್ತದೆ. ಈ ವಿಚಾರದಲ್ಲಿ ಸಂತ್ಯಾಂಶ ಹೊರಬರದಿದ್ದರೆ ಈ ಸರ್ಕಾರದ ಮೇಲೆ ಈ ಒಂದು ಕಳಂಕ ಇದ್ದೇ ಇರುತ್ತದೆ. ಮುಂದೆ ಈ ಕಳಂಕವನ್ನು ಏನು ಮಾಡಿದರೂ ತೊಳೆಯುವುದಕ್ಕಾಗುವುದಿಲ್ಲ ಯಾವುದೇ ಒಂದು ಅಪರಾಧ ನಡೆದರೂ ಕೂಡ ಅದರ ಹಿಂದೆ ಏನಾದರೂ ಒಂದು ಹಿನ್ನೆಲೆ ಇದ್ದೇ ಇರುತ್ತದೆ. ಸರಕ್ಯುಟಿನ್ವಿಯಲ್ ಎವಿಡೆನ್ಸ್ ಇದ್ದೇ ಇರುತ್ತದೆ. ಆದ್ದರಿಂದ ಇಲ್ಲಿ ಸತ್ಯವನ್ನು ಮುಚ್ಚಿಡಲು ಸಾಧ್ಯವಾಗುವುದಿಲ್ಲ. ಸತ್ಯವನ್ನು ಹೊರತೆಗೆಯಲು ಹಾಗೂ ಪತ್ತೆ ಮಾಡಲು ಈ ಸರ್ಕಾರಕ್ಕೆ ಶಕ್ತಿ ಇದೆ. ಆದರೂ ಸತ್ಯವನ್ನು ಹೊರತೆಗೆಯಲು ನೀವು ಅಸಕ್ತರಾದರೆ ನಿಮ್ಮ ಮೇಲೆ ಲೋಪ ಬರುತ್ತದೆ, ಹಾಗೂ ದೋಷ ಬರುತ್ತದೆ. ಮುಂದೆ ಕರ್ನಾಟಕದ ಜನತೆ ನಿಮ್ಮನ್ನು ಕ್ಷಮಿಸಲಾರರು, ಪತ್ರಿಕಾ ಸ್ವಾತಂತ್ರ್ಯದ ಮೇಲೆ ನಡೆದಂಥ ಕಗ್ಗೊಲೆಯನ್ನು ಸರಿಪಡಿಸುವುದು ತಮ್ಮ ಆದ್ಯ ಕರ್ತವ್ಯವಾಗಿದೆ. ಇದನ್ನು ತನಿಖೆ ಮಾಡಲು ಈ ಸದನದ ಸದಸ್ಯರು ಇರುವಂತಹ ಒಂದು ಸಮಿತಿಯನ್ನು ತಾವು ರಚನೆ ಮಾಡಬೇಕು. ಆ ಸಮಿತಿಯವರು ಒಂದು ನಿರ್ದಿಷ್ಟವಾದ ಸಮಯದಲ್ಲಿ ವರದಿ ಕೊಡಲಿ. ಅನಂತರ ಅದರ ಆಧಾರದ ಮೇಲೆ ಸಿ. ಬಿ. ಐ. ತನಿಖೆ ಮಾಡುವುದು ಅತ್ಯವಶ್ಯಕವಾಗಿದೆ. ಈ ಕೊಲೆ ಬಗ್ಗೆ ಜನರಲ್ಲಿ ಒಂದು ರೀತಿಯ ಭಯ ಉಂಟಾಗಿದೆ. ಅದರ ನಿವಾರಣೆಗೆ ಒಂದು ಸಮಿತಿ ರಚಿಸುವುದು ಅತ್ಯಗತ್ಯವಾಗಿದೆ. ಈ ವಿಚಾರದಲ್ಲಿ ತಮ್ಮ ಮನಸ್ಸು ಕೂಡ ಕರಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಸರ್ಕಾರದ ಒಂದು ನಿಷ್ಕ್ರಿಯತೆಯಿಂದ ಈ ಕೊಲೆ ನಡೆದಿದೆ. ಆದ್ದರಿಂದ ನಾವು ಕೊಟ್ಟಿರುವ ನಿಲುವಳಿ ಸೂಚನೆಯನ್ನು ತಾವು ಒಪ್ಪಿಕೊಂಡು ಅದರ ಮೇಲೆ ವಿವರವಾಗಿ ಚರ್ಚೆ ಮಾಡಲು ತಾವು ಅನುಮತಿ ಕೊಡಬೇಕೆಂದು ತಮ್ಮಲ್ಲಿ ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಈ ನಿಲುವಳಿ ಸೂಚನೆ ಮೇಲೆ ವಿರೋಧ ಪಕ್ಷದ ನಾಯಕರು ಮತ್ತು ಉಪನಾಯಕರು ಮಾತನಾಡಿರುವುದರಿಂದ ನಾನು ಹೆಚ್ಚಿನ ವಿಷಯಗಳನ್ನು ಪ್ರಸ್ತಾಪ ಮಾಡುವುದಿಲ್ಲ. ನಾನು ಇಷ್ಟು ಮಾತ್ರ ಹೇಳ ಬಯಸುತ್ತೇನೆ. ಏನೆಂದರೆ, ಶ್ರೀ ಸಿದ್ದರಾಮೇಶ್ ಅವರು ತಮ್ಮ ಜೀವಕ್ಕೆ ಆಪಾಯವಿದೆ ಅನ್ನತಕ್ಕಂಥ ಮಾತನ್ನು ಪದೇ ಪದೇ ತಮ್ಮ ಪತ್ರಿಕೆಯ ಮುಖಾಂತರ ಪ್ರಕಟ ಮಾಡುತ್ತಿದ್ದರು ಇದರ ಜೊತೆಗೆ ತಾ|| 18-11-1983 ರಂದು ಮುಖ್ಯಮಂತ್ರಿಗಳು ಗುಲ್ಬರ್ಗಕ್ಕೆ ಭೇಟಿ ಕೊಟ್ಟಾಗ ಕ್ರಾಂತಿ ಪತ್ರಿಕೆಯ ಒಂದು ವಿಶೇಷ ಸಂಚಿಕೆಯನ್ನು ನಾಲ್ಕು ಪುಟಗಳಷ್ಟು ಪ್ರಕಟ ಮಾಡಿ ಮುಖ್ಯಮಂತ್ರಿಗಳಿಗೆ ಕೊಟ್ಟರು. ಯಾವಯಾವ ರೀತಿಯಾಗಿ ಪೋಲೀಸರು ಅವರ ಜೊತೆಯಲ್ಲಿ ನಡೆದುಕೊಂಡರು ಹಾಗೂ ಏನೇನು ತೊಂದರೆ ಕೊಟ್ಟರು ಎಂಬ ಒಗ್ಗೆ ಸವಿಸ್ತಾರವಾದ ಮಾಹಿತಿಗಳನ್ನು ಅದರಲ್ಲಿ ಕೊಟ್ಟಿದ್ದರು ಮತ್ತು ತಮಗೆ ರಕ್ಷಣೆ ಬೇಕಾಗಿದೆ ಎಂದು ಅದರಲ್ಲಿ ಕೇಳಿಕೊಂಡಿದ್ದರು. ಇಷ್ಟೆಲ್ಲಾ ಕೇಳಿಕೊಂಡ ಮೇಲೂ ಸಹ ಸರ್ಕಾರದವರು ಅವರಿಗೆ ಸೂಕ್ತ ರಕ್ಷಣೆ ಕೊಡದ ಕಾರಣದಿಂದ ಇದೇ ತಿಂಗಳ 14ನೇ ತಾರೀಖು ರಾತ್ರಿ ಸುಮಾರು ಹತ್ತುವರೆ ಗಂಟೆಯ ಸಮಯದಲ್ಲಿ ಅವರ ಕೊಲೆ ಗುಲ್ಬರ್ಗ ಬಸ್ ಸ್ಟಾಂಡ್‌ನ ಎದುರುಗಡೆ ನಡೆಯಿತು, 14ನೇ ತಾರೀಖು ಕೊಲೆ ನಡೆದರೂ ಸಹ ಇಲ್ಲಿಯವರೆಗೆ ಒಬ್ಬರನ್ನೂ ಕೂಡ ಅರೆಸ್ಟ್ ಮಾಡಿಲ್ಲ, ಈ ಕೊಲೆ ನಡೆದ ತಕ್ಷಣ ಅಲ್ಲಿನ ಪೋಲೀಸರು ಈ ಬಗ್ಗೆ ಸಿ. ಒ. ಡಿ. ಯಿಂದ ತನಿಕೆ ಮಾಡಿಸ ಬೇಕೆಂದು ರೆಕಮೆಂಡ್ ಮಾಡಿದರು. ಅದನ್ನು ಕೂಡಲೆ ಸರ್ಕಾರದವರು ಒಪ್ಪಿಕೊಂಡು ಬೆಂಗಳೂರಿನಿಂದಲೇ ಈ ಬಗ್ಗೆ ಒಂದು ಪ್ರೆಸ್ ಸ್ಟೇಟ್‌ಮೆಂಟ್ ಇಷ್ಯೂ ಮಾಡಿದರು. ಇದರ ಮೇಲೆ ಸಿ ಒ. ಡಿ. ಪೋಲೀಸರ ಮೇಲೆ ಬಂದಿರುವ ದೂರನ್ನು ತನಿಕೆ ಮಾಡಬೇಕಾಗಿದೆ, ತಮಗೆ ರಕ್ಷಣೆ ಬೇಕೆಂದು ಅವರು ಪದೇ ಪದೇ ಕೇಳಿಕೊಂಡಿದ್ದರು ಮತ್ತು ನಾವೂ ಸಹ ಹೋದ ಸಲ ಇದೇ ಸಭೆಯಲ್ಲಿ ಅವರಿಗೆ ರಕ್ಷಣೆ ಕೊಡಬೇಕೆಂದು ಕೇಳಿಕೊಂಡಿದ್ದೆವು, ಆದರೂ ಅವರಿಗೆ ರಕ್ಷಣೆ ಸಿಗಲಿಲ್ಲ,

ಶ್ರೀ ವಿ. ಎಲ್. ಪಾಟೀಲ್.--ಎಲ್ಲರೂ ಒಂದೇ ರೀತಿ ಬಾಯಿ ಪಾಠ ಮಾಡಿಕೊಂಡು ಬಂದಂತೆ ಕಾಣುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.--ಅದನ್ನು ನನಗೆ ಹೇಳಬೇಡಿ. ನಿರ್ಮಾದೆಲ್ಲಾ ನನಗೆ ಗೊತ್ತಿದೆ,

* * * *

ಮಾನ್ಯ ಅಧ್ಯಕ್ಷರೇ ತಾ 26-8-83 ರಂದು ಇವರ ಮೇಲೆ ಪೋಲಿಸರು ಹಲ್ಲೆ ನಡೆಸಿದರು ಪೋಲೀಸರು ಇವರನ್ನು ಬಡಿದು, ಒದ್ದುಕೊಂಡು ಪೋಲೀಸ್ ಸ್ಟೇಷನಿಗೆ ಕರೆದುಕೊಂಡು ಹೋಗಿ. ಒಳಗೆ ಹಾಕಿದ್ದು ಆಗಲೂ ನಾವು ಇದೇ ಮಾತನ್ನು ಹೇಳಿದೆವು, ಆಗ ಮುಖ್ಯಮಂತ್ರಿಗಳು ಅವನು ರೌಡಿ ಇದ್ದಾನೆ ಅವನ ಮೇಲೆ 7-8 ಕೇಸ್‌ಗಳಿವೆ ಎಂಬುದಾಗಿ ಹೇಳಿದರು. ಇದ್ದಂಥ ವಿಚಾರಗಳನ್ನು ಒರೆಯುತ್ತಿದ್ದ ಒಬ್ಬ ಪತ್ರಿಕಾ ಸಂಪಾದಕರ ಗತಿಯೇ ಈ ರೀತಿಯಾದರೆ ಇನ್ನು ಸಾಮಾನ್ಯ ಜನರ ಸ್ಥಿತಿ ಏನು ? ಇದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು ಕೊಲೆ ನಡೆದು 8 ದಿನಗಳಾದ ಮೇಲೂ ಕೂಡ ಇನ್ನೂ ಒಬ್ಬರನ್ನು ಸಹ ಅರೆಸ್ಟ್ ಮಾಡಿಲ್ಲ ಇದನ್ನು ಸಿ. ಒ. ಡಿ. ತನಿಖೆಗೆ ಹಾಕಿದ್ದಾರೆ. ಆದರೆ ಅವರ ಕೈಯಿಂದಲೂ ಸಹ ಇದನ್ನು ಪತ್ತೆ ಮಾಡಲು ಸಾಧ್ಯವಾಗಿಲ್ಲ. ಇವರು ಕೊಲೆಯಾದ ಮೇಲೆ ಇವರ ಶವವನ್ನು ಪೋಲೀಸರು ಆಸ್ಪತ್ರೆಗೆ ತೆಗೆದುಕೊಂಡು ಹೋದಾಗ ಜನರು ಸಾಕ್ಷಿ ಹೇಳಲು ಮುಂದೆ ಬರಲಿಲ್ಲ ಸಾಕ್ಷಿ ಹೇಳಲು ಮುಂದೆ ಹೋದರೆ ಎಲ್ಲಿ ಏನಾಗುತ್ತದೋ ಮತ್ತು ತಮ್ಮ ಹೆಸರನ್ನು ಬರೆದುಕೊಳ್ಳುತ್ತಾರೋ ಎಂಬ ಭಯದಿಂದ ಯಾರೂ ಸಾಕ್ಷಿಹೇಳಲು ಮುಂದೆ ಬರಲಿಲ್ಲ. ಆ ಹೆಣದ ಸುತ್ತಮುತ್ತ ನೂರಾರು ಜನ ಪೋಲೀಸರು ಸಿವಿಲ್ ಡ್ರೆಸ್‌ನಲ್ಲಿದ್ದರು. ಅಲ್ಲಿ ಅನೇಕ ಜನ ಸಿ ಐ. ಡಿ. ಗಳಿದ್ದರು. ಈ ಭಯದಿಂದ ಯಾರೂ ಸಹ ಸಾಕ್ಷಿ ಹೇಳಲು ಬರಲಿಲ್ಲ ಅನಂತರ ಮೆರವಣಿಗೆ ನಡೆಯಿತು. ಆಗಲೂ ಸಹ ಸುಮಾರು 500 ಜನ ಪೋಲೀಸರು ಇದ್ದರು ನಾನು ಯಾವ ಮೆರವಣಿಗೆಯಲ್ಲೂ ಸಹ ಇಷ್ಟೊಂದು ಜನ ಪೋಲೀಸರನ್ನು ನೋಡಿರಲಿಲ್ಲ. ಶ್ರೀ ಮಹದೇವಪ್ಪ ರಾಂಪುರ್ ಅವರು ಸತ್ತಾಗ ಮತ್ತು ಶ್ರೀ ಶರಣಬಸಪ್ಪ ಅವರು ಸತ್ತಾಗ ನಡೆದಂಥ ಮೆರವಣಿಗೆಯಲ್ಲಿ ಇಷ್ಟೊಂದು ಜನ ಪೋಲೀಸರು ಬರಲಿಲ್ಲ. ದೊಡ್ಡ ದೊಡ್ಡ ಮುಖಂಡರು, ಪುಡಾರಿಗಳು ಸತ್ತಾಗಲೂ ಸಹ ಇಷ್ಟೊಂದು ಜನ ಪೋಲಿಸರು ಇರಲಿಲ್ಲ ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ಮಾಡಿ ಸತ್ತ ಶ್ರೀ ಗಂಗಾಧರ ಸನೋಷ ಹಾಗೂ ಇನ್ನಿತರ ಕ್ರಾಂತಿಕಾರಿ ನಾಯಕರು ಸತ್ತಾಗಲೂ ಸಹ ಇಷ್ಟು ಪೋಲೀಸರು ಇರಲಿಲ್ಲ. ಆದರೆ ಮೊನ್ನೆ ನಡೆದ ಮೆರವಣಿಗೆಯಲ್ಲಿ ಎಲ್ಲಿ ನೋಡಿದರು ಸಹ ಪೋಲೀಸರೇ ಇದ್ದರು. ಆದರೆ ಅವರು ಒದುಕಿದಾಗ ಮಾತ್ರ ಪೋಲೀಸರು ರಕ್ಷಣೆ ಕೊಡಲಿಲ್ಲ ಇದು ಏನು ತೋರಿಸುತ್ತೆ; ಸರ್ಕಾರದ ಕೈವಾಡ ಇದೆ ಎನ್ನುತಕ್ಕ ಸಂಶಯ ಬರುತ್ತೇ ಸರ್ಕಾರವೇ ಪೋಲೀಸಿನವರಿಗೆ ಪ್ರೋತ್ಸಾಹ ಕೊಡುತ್ತಿದೆ ಎನ್ನುವ ಸಂಶಯ ಬರುತ್ತೆ. ಇವತ್ತು ಪ್ರಪಂಚದಲ್ಲಿ ಹಾಗೂ ಸಮಾಜದಲ್ಲಿ ಕೆಟ್ಟವರೂ ಇರುತ್ತಾರೆ ; ಒಳ್ಳೆಯವರೂ ಇರುತ್ತಾರೆ. ಕೆಟ್ಟವರು ಅಂದರೆ ಎಲ್ಲರ ಮೇಲೂ ಕ್ರಮ ತೆಗೆದುಕೊಳ್ಳುತ್ತೀರಾ ? ನನ್ನ ವಿರುದ್ಧ ಯಾರು ಬರೆಯುತ್ತಾರೆ ; ಅವರನ್ನು ಮುಗಿಸಿ ; ನನ್ನ ವಿರುದ್ಧ ಯಾರು ಮಾತನಾಡುತ್ತಾರೆ ; ಅವರನ್ನು ಮುಗಿಸಿ ಅಂದರೆ ಏನರ್ಥ ? ಇವತ್ತು ಸಮಾಜದಲ್ಲಿ ಬೇರೆ ಬೇರೆ ತತ್ವಗಳು ಇರತಕ್ಕ ಜನರು ಇರುವಾಗ ; ಬೇರೆ ತತ್ವಗಳಲ್ಲಿ ನಂಬಿಕೆ ಇರತಕ್ಕ ಜನ ನಮ್ಮ ತತ್ವಕ್ಕೆ ಒಪ್ಪುವುದಿಲ್ಲ ಎನ್ನುವ ಒಂದೇ ಕಾರಣದಿಂದ ಸರ್ಕಾರ ಬೆಂಬಲ ನೀಡಿದರೆ ಹೇಗೆ ?

Expunged as ordered by the Chair

ಶ್ರೀ ಆರ್. ಎಲ್. ಜಾಲಪ್ಪ.--ಸರ್ಕಾರವೇ ಮಾಡಿಸಿದೆಯೆಂದು ತಾವು ಹೇಳುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.--ಇಲ್ಲ ಎಂದು ತಾವು ಹೇಳಿ ಆತ ನೇರವಾಗಿ ಮುಖ್ಯಮಂತ್ರಿಯನರಿಗೇ ಪತ್ರಬರೆದಿದ್ದಾನೆ.ಮಾನ್ಯ ಮುಖ್ಯಮಂತ್ರಿಯವರು ಕೂಡ ನನ್ನ ಬಗ್ಗೆ ಮೆಚ್ಚಿಗೆ ವ್ಯಕ್ತ ಮಾಡಿದ್ದಾರೆಂದು ಅವರು ಹೇಳಿದ್ದಾರೆ. ನನ್ನನ್ನು ಉಳಿಸಿಕೊಳ್ಳಿ ಎಂದು ಪತ್ರ ಬರೆದದ್ದು ತಮಗೆ ಬರಲಿಲ್ಲವೆ ? ನಿಮ್ಮ ಮುಂತ್ರಿಯವರು ಭಯದವಾತಾವರಣ ಮೂಡಿಸಿದ್ದಾರೆ ; ನನ್ನನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಹೊಡೆಯುತ್ತಿದ್ದಾರೆ ; ಬೀದಿಯಲ್ಲಿ ಎಳೆದುಕೊಂಡು ಒಡಾಡಿಸಿ ಹೊಡೆಯುತ್ತಿದ್ದಾರೆಂದು ತಿಳಿಸಿದ್ದು ನೆನಪು ಬರಲಿಲ್ಲವೆ ? 20 ಜನ ಪೋಲೀಸಿನವರು ಕ್ರಾಂತಿ ಪತ್ರಿಕೆಯ ಮೇಲೆ ದಾಳಿ ಮಾಡಿದಾಗ ಸರಕ್ಷಣೆ ಮಾಡಬೇಕೆಂದು ಕೇಳಿದ್ದು ನೆನಪು ಬರಲಿಲ್ಲವೆ ? ಒಂದಲ್ಲ ; ಹತ್ತಾರು ಸಲ ಪತ್ರಗಳ ಮೂಲಕ ಕೇಳಿಕೊಂಡರೂ ಅತನಿಗೆ ರಕ್ಷಣೆ ಕೊಡದೇ ಬಸ್ ನಿಲ್ದಾಣದಿಂದ ಒದ್ದು ಫರ್ಲಾಂಗ್ ದೂರದಲ್ಲಿ ಕೊಲೆ ಮಾಡಲಾಗಿದೆ. ಸಂತೋಷ ಚಿತ್ರಮಂದಿರದ ಹತ್ತಿರ ಕೊಲೆಯಾಗಿದೆ ; ನೂರಾರು ಜನರು ಎರಡನೇ ಪ್ರದರ್ಶನದ ಆಟ ನೋಡಿಕೊಂಡು ಬರುತ್ತಿರುತ್ತಾರೆ. ಪಕ್ಕದಲ್ಲಿಯೇ ಎಂ. ಎ. ಎಸ್. ಮಿಲ್ ಇದ್ದು ; ಸಾವಿರಾರು ಕಾರ್ಮಿಕರು 2ನೇ ಶುತ್ತಿನ ಪಾಳಿಗೆ ಕೆಲಸಕ್ಕೆ ಹೋಗುತ್ತಿರುತ್ತಾರೆ, ಅಂಥ ಸಂದರ್ಭದಲ್ಲಿ ಕೊಲೆ